**(ಇಂದು ದಿಃ 19.12.2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಪಾಟೀ ಸವಾಲು ಃ- ಶ್ರೀ ಎಲ್.ಕೆ.ಎಂ. ವಕೀಲರಿಂದ ಪ್ರತಿವಾದಿ ಪರ ಃ-

ನಿಪಿ-10 ಮತ್ತು 11ನ್ನು ನನಗೆ ನಮ್ಮ ವಕೀಲರು ನೀಡಿರುತ್ತಾರೆ. ನಿಪಿ-1ನ್ನು ಮಾಡುವ ದಿನದಂದು ಧನ್ನು ತಂದೆ ರಾಮಚಂದ್ರ ರಾಠೋಡ ಸಹ ನಮ್ಮೊಂದಿಗೆ ಆಳಂದ ನಗರಕ್ಕೆ ಬಂದಿದ್ದನು ಎಂದರೆ ಸರಿ. ನಿಪಿ-1ನ್ನು ಮಾಡುವ ದಿನದಿಂದು ನಾನು ಹಾಜರು ಇದ್ದೇನು, ಆದರೆ ಸದರಿ ಕರಾರಿಗೆ ನಾನ ಸಹಿ ಮಾಡಿರುವುದಿಲ್ಲ. ಸದರಿ ಧನ್ನು ಓ.ಎಸ್.ನಂ.4/2020ರಲ್ಲಿನ ವಾದಿಯಾದ ಗುಲಾಬ ರಾಠೋಡ ರವರ ತಂದೆಯಾಗಿರುತ್ತಾರೆ. ಪ್ರತಿವಾದಿ ದಾವಾ ಸ್ವತ್ತುನ್ನು ತನ್ನ ಮಗಳ, ಮಗಳ ವಿವಾಹಕ್ಕಾಗಿ ಮಾರಾಟ ಮಾಡಲು ಒಪ್ಪಿ ರುತ್ತಾಳೆ ಎಂದು ವಾದ ಪತ್ರದಲ್ಲಿ ಆಗಲಿ, ನನ್ನ ಸಾಕ್ಷ್ಯದ ಪ್ರಮಾಣ ಪತ್ತದಲ್ಲಿ ಆಗಲಿ ಅಥವಾ ಪ್ರತಿವಾದಿಗೆ ನೀಡಿದ ನೋಟಿಸ್‌ನಲ್ಲಿ ಆಗಲಿ ನಮೂದು ಮಾಡಿಲ್ಲ ಎಂದರೆ, ಸಾಕ್ಷಿಯು ನಮೂದಿಸಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ ತನ್ನ ಮೊಮ್ಮಗಳ ವಿವಾಹಕ್ಕಾಗಿ ದಾವಾ ಸ್ವತ್ತುನ್ನು ಮಾರಾಟ ಮಾಡಲು ಒಪ್ಪಿ ರುತ್ತಾಳೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.